13. ದಕ್ಷಿಣ ಕನ್ನಡ ಜಿಲ್ಲೆಯ – ಮೂಡಬಿದರೆ ಮತ್ತು ಕಡಬ

14. ಬೆಂಗಳೂರು ನಗರ ಜಿಲ್ಲೆಯ – ಯಲಹಂಕ

15. ವಿಜಯಪುರ ಜಿಲ್ಲೆಯ – ಬಬಲೇಶ್ವರ, ನಿಡಗುಂದಿ, ತಿಕೋಟ, ದೇವರಹಿಪ್ಪರಗಿ, ತಾಳಿಕೋಟೆ, ಚಡಚಣ ಮತ್ತು ಕೋಲ್ಹಾರ

ಆ) ಮತ್ತು ಇ) ಈ ಬಗ್ಗೆ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಂತಹಂತವಾಗಿ ಹೊಸ ತಾಲ್ಲೂಕುಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ತಾಲ್ಲೂಕೆಂದು ಅಧಿಸೂಚಿಸಿದ ನಂತರ ಸೇರ್ಪಡೆಗೊಳಿಸಬಹುದಾದ ಗ್ರಾಮಗಳ ಮಾಹಿತಿ ಲಭ್ಯವಾಗುತ್ತದೆ. ಪ್ರಸ್ತುತ ನಿಪ್ಪಾಣಿ ವಿಧಾನ ಸಭಾ ಮತ ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳನ್ನು ನಿಪ್ಪಾಣಿಗೆ ಸೇರ್ಪಡೆ ಮಾಡುವಂತೆ ಪ್ರಸ್ತಾವನೆಯು ಸ್ವೀಕೃತವಾಗಿರುತ್ತದೆ ಹಾಗೂ ನಿಪ್ಪಾಣಿಯು ತಾಲ್ಲೂಕು ಎಂದು ಅಧಿಸೂಚನೆ ಹೊರಡಿಸಿದ ನಂತರ ಸೇರ್ಪಡೆ ಮಾಡಲಾದ ಗ್ರಾಮಗಳ ಮಾಹಿತಿಯು ಲಭ್ಯವಾಗುತ್ತದೆ.

ಉ) ತಾಲ್ಲೂಕು ರಚನೆ ಮಾಡಿದ ನಂತರ ಮಾಹಿತಿ ಲಭ್ಯವಾಗುತ್ತದೆ.

ಬೆಳಗಾವಿಯಲ್ಲಿ ಕೆ.ಎ.ಟಿ. ಸ್ಥಾಪಿಸುವುದು

77(221); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ರಾಜ್ಯದ ಗಡಿ ಜಿಲ್ಲೆಯಾಗಿರುವ ಬೆಳಗಾವಿಯಲ್ಲಿ ಕೆ.ಎ.ಟಿ.(ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ) ಸ್ಥಾಪಿಸುವಲ್ಲಿ ರಾಜ್ಯ ಸರ್ಕಾರದ ನಿಲುವು ಏನು;

ಆ) ಉತ್ತರ ಕರ್ನಾಟಕದ ಬೆಳಗಾವಿಯಲ್ಲಿ ಕೆ.ಎ.ಟಿ. ಸ್ಥಾಪನೆ ಮಾಡಲು ಈಗಾಗಲೇ ಸರ್ಕಾರವು ಒಪ್ಪಿಕೊಂಡಿದೆಯೇ; ಹಾಗಿದ್ದಲ್ಲಿ, ಈವರೆಗೆ ಆರಂಭಿಸದಿರಲು ಕಾರಣವೇನು;

ಇ) ಸಾರ್ವಜನಿಕ ಹಿತದೃಷ್ಟಿಯಿಂದ ಬೆಳಗಾವಿಯಲ್ಲಿ ಕೆ.ಎ.ಟಿ.ಯನ್ನು ಯಾವಾಗ ಆರಂಭಿಸಲಾಗುವುದು?

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ)

ಅ) ಇಂದ ಇ) ಬೆಳಗಾವಿಯಲ್ಲಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯನ್ನು ಸ್ಥಾಪಿಸಲು ತಾತ್ವಿಕವಾಗಿ ಸ್ಥಾಪಿಸಲು ನಿರ್ಣಯಿಸಲಾಗಿದೆ.

ಕುಡಿಯುವ ನೀರಿನ ಯೋಜನೆ

78(8); ಕೋನರೆಡ್ಡಿ ಎನ್.ಎಚ್. (ನವಲಗುಂದ)

ಅ) ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳಿಗೆ ಕುಡಿಯುವ ನೀರನ್ನು ಪೂರೈಸಲು ಯಾವುದಾದರೂ ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಚಿಂತನೆ ನಡೆಸಿದೆ.

ಇ) ಈ ಹೊಸ ಯೋಜನೆಯಿಂದ ಅಧುನಿಕ ರೀತಿಯಲ್ಲಿ ದುರಸ್ತಿಗೊಳಿಸಿ ನವಲಗುಂದ, ಧಾರವಾಡ, ಹುಬ್ಬಳ್ಳಿ, ಕುಂದಗೋಳ ಮುಂತಾದ ತಾಲ್ಲೂಕುಗಳಿಗೆ ಶಾಶ್ವತ ಶುದ್ಧ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಈ ಯೋಜನೆಗೆ ಡಿ.ಪಿ.ಆರ್. ತಯಾರಿಸಿ ಸಚಿವ ಸಂಪುಟದ ಒಪ್ಪಿಗೆಯನ್ನು ಪಡೆಯಲಾಗಿದೆಯೇ;

ಉ) ಹಾಗಿದ್ದಲ್ಲಿ, ಈ ಯೋಜನೆಗಾಗಿ ಸರ್ಕಾರ ಅನುದಾನವನ್ನೇನಾದರು ನಿಗದಿಪಡಿಸಿ ಬಿಡುಗಡೆ ಮಾಡಿದೆಯೇ;